ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.,
ನ್ಯಾಯಾಲಯ, ಚಿಕ್ಕಮಗಳೂರು.
ಸಿ.ಸಿ.715/2024

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಎಂ.ಕೆ.ರೇವತಿ | ಪಿ.ಡಬ್ಲ್ಯೂ.1 |
| ಗಂಡನ ಹೆಸರು | : | ಲೇಟ್ ಲೋಕನಾಥ್ ವೈ. | ಸಿ.ಡಬ್ಲ್ಯೂ.1 |
| ವಯಸ್ಸು | : | 61 ವರ್ಷ | |
| ವೃತ್ತಿ | : | ನಿವೃತ್ತ ಮುಖ್ಯ ಆಡಳಿತಾಧಿಕಾರಿಗಳು, | |
| ವಾಸ | : | ಶಿವಮೊಗ್ಗ | |

ದಿನಾಂಕಃ 12-03-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಸಾಕ್ಷಿ ಸ್ವತಃ-

ನಾನು ದಿಃ08.01.2021 ರಿಂದ ದಿಃ31.07.2024 ರವರೆಗೆ ಚಿಕ್ಕಮಗಳೂರಿನ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಮುಖ್ಯ ಆಡಳಿತಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ಆರೋಪಿಯನ್ನ ನಾನು ನೋಡಿದ್ದೇನೆ. ಆರೋಪಿ ಕಡೂರಿನ ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಸೇವಕನಾಗಿ ಸೇವೆ ಸಲ್ಲಿಸಿರುವ ವಿಚಾರ ಆತನ ಮೇಲೆ ಇಲಾಖಾ ವಿಚಾರಣೆ ಕಾಲಕ್ಕೆ ತಿಳಿದುಬಂದಿರುತ್ತದೆ. ಆರೋಪಿ ವಿರುದ್ಧ ಇಲಾಖಾ ವಿಚಾರಣೆ ನಡೆದು ದಿಃ30.04.2022 ರಂದು ಆದೇಶ ಹೊರಬಂತು. ಆತನ ವಿರುದ್ಧ ಇಲಾಖಾ ವಿಚಾರಣಾ ಸಂಖ್ಯೆಃ2/2021 ರಂತೆ ವಿಚಾರಣೆ ನಡೆದಿರುತ್ತದೆ. ಸದರಿ ಇಲಾಖಾ

ವಿಚಾರಣೆಯಲ್ಲಿ ಆರೋಪಿ ತಪ್ಪಿತಸ್ಥನೆಂದು ನಿರ್ಣಯಿಸಿದ್ದು ಶಿಸ್ತು ಪ್ರಾಧಿಕಾರ ಮತ್ತು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಆತನನ್ನ ಸೇವೆಯಿಂದ ವಜಾಗೊಳಿಸಿ ಆದೇಶಿಸಿದ್ದಲ್ಲದೆ ಮುಖ್ಯ ಆಡಳಿತಾಧಿಕಾರಿಗೆ ಆತನ ವಿರುದ್ಧ ಕ್ರಿಮಿನಲ್ ಕ್ರಮ ಜರುಗಿಸುವಂತೆ ನಿರ್ದೇಶಿಸಿದ್ದರು. ಸದರಿ ಆದೇಶವನ್ನ ಅನುಸರಿಸಿ ನಗರ ಪೊಲೀಸ್ ಠಾಣೆಗೆ ದೂರು ದಾಖಲು ಮಾಡಿರುತ್ತೇನೆ. ಆರೋಪಿ ತನ್ನ 7 ನೇ ತರಗತಿಯ ಅಂಕಪಟ್ಟಿಯನ್ನ ನಕಲು ಮಾಡಿ ಅದನ್ನ ಸೇವೆಗೆ ಸೇರಲು ದುರುಪಯೋಗಪಡಿಸಿಕೊಂಡು ನೇಮಕಗೊಂಡಿದ್ದ. ಆದ್ದರಿಂದ ಆತನ ವಿರುದ್ಧ ಶಿಸ್ತು ಪ್ರಾಧಿಕಾರ ಕ್ರಮ ಜರುಗಿಸಿತ್ತು. ಸಾಕ್ಷಿಗೆ ದೂರನ್ನ ತೋರಿಸಲಾಗಿ ಅದರ ಮೇಲೆ ಇರುವ ತನ್ನ ಸಹಿಯನ್ನ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದೂರು ಕೊಟ್ಟ ನಂತರ ತನಿಖಾಧಿಕಾರಿ ನಮ್ಮ ಕಛೇರಿಗೆ ಮಹಜರ್ ಗೆ ಬಂದಿದ್ದರು. ಮಹಜರಿ ಕಾಲಕ್ಕೆ ಇಬ್ಬರು ಸಾಕ್ಷಿದಾರರನ್ನ ತನಿಖಾಧಿಕಾರಿ ಬರಮಾಡಿಕೊಂಡಿರುತ್ತಾರೆ. ಪೊಲೀಸರು ನನ್ನ ಸಮಕ್ಷಮದಲ್ಲಿ ಮಹಜರ್ ಬರೆದಿರುತ್ತಾರೆ, ಮಹಜರ್ ಗೆ ನಾನು, ಹಾಜರಿದ್ದ ಪಂಚಸಾಕ್ಷಿಗಳು, ಪೊಲೀಸರು ಸಹಿ ಮಾಡಿರುತ್ತೇವೆ. ಮಹಜರ್ ಕಾಲಕ್ಕೆ ಫೋಟೋ ತೆಗೆದರು. ಸಾಕ್ಷಿಗೆ ಮಹಜರ್ ಅನ್ನ ತೋರಿಸಲಾಗಿ ಅದರ ಮೇಲೆ ಇರುವ ತನ್ನ ಸಹಿಯನ್ನ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-2 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಫೋಟೋವನ್ನ ತೋರಿಸಲಾಗಿ ಅದನ್ನ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ನಿಪಿ-3 ರಲ್ಲಿ ಕಾಣುವ ಜಾಗ ಮಾನ್ಯ ಜಿಲ್ಲಾ

ನ್ಯಾಯಾಲಯದಲ್ಲಿ ಇರುವ ಮುಖ್ಯ ಆಡಳಿತಾಧಿಕಾರಿ ಕಛೇರಿ ಆಗಿದ್ದು ಅದರಲ್ಲಿ ನಾನು, ಪಂಚಸಾಕ್ಷಿಗಳು ಮತ್ತು ಪೊಲೀಸರು ಇದ್ದೇವೆ. ತದನಂತರ ತನಿಖಾಧಿಕಾರಿ ನನಗೆ ಮನವಿಯನ್ನ ಸಲ್ಲಿಸಿ ಅದರಲ್ಲಿ ನೇಮಕಾತಿ ಅಧಿಸೂಚನೆ, ಸೇವಕ ಹುದ್ದೆಗೆ ನಡೆದ ನೇಮಕಾತಿ ಅಂತಿಮ ಪಟ್ಟಿ, ಆರೋಪಿ ನೇಮಕಾತಿಗೆ ಸಲ್ಲಿಸಿದ್ದ ದಾಖಲಾತಿಗಳ ವಿವರ ಮತ್ತು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ನೀಡಿದ ಆದೇಶ ಪತ್ರ, ವಿಚಾರಣಾ ಇಲಾಖಾ ಸಂಖ್ಯೆ:2/2021 ರ ಸಂಪೂರ್ಣ ದಾಖಲಾತಿಗಳನ್ನ ಕೊಡುವಂತೆ ಕೇಳಿದ್ದರು. ಸಾಕ್ಷಿಗೆ ಮನವಿಯನ್ನ ತೋರಿಸಲಾಗಿ ಅದರ ಮೇಲೆ ಇರುವ ತನ್ನ ಸಹಿಯನ್ನ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-4 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸದರಿ ಮನವಿಯನ್ನ ಪುರಸ್ಕರಿಸಿ ಮನವಿಯಲ್ಲಿ ಕೇಳಿದಂತೆ 2014 ರ ಅಧಿಸೂಚನೆ, ಅಂತಿಮ ಆಯ್ದೆ ಪಟ್ಟಿ, ಡಿ.ಇ.ಗೆ ಸಂಬಂಧಿಸಿದ ದಾಖಲಾತಿಗಳು ಮತ್ತು ಆತ ನೇಮಕಾತಿಗೆ ಸಲ್ಲಿಸಿದ್ದ ದಾಖಲಾತಿಗಳನ್ನ ಕಳುಹಿಸಿಕೊಟ್ಟಿರುತ್ತೇನೆ. ಈ ಸಂಬಂಧ ನಾನು ಪತ್ರ ವ್ಯವಹಾರ ಮಾಡಿದ್ದು ಅದರ ಮೇಲೆ ಇರುವ ಸಹಿಯನ್ನ ನೋಡಿ ಗುರುತಿಸಿದ್ದೇನೆ. ಅದನ್ನ ನಿಪಿ-5 ಎಂದು ಮತ್ತು ಸಾಕ್ಷಿಯ ಸಹಿಯನ್ನ ನಿಪಿ-5(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಡಿ.ಇ.2/2021 ರ ತೀರ್ಪು, ಅದರ ಅಡಕಗಳನ್ನ ನೋಡಿ ಗುರುತಿಸಿದ್ದೇನೆ. ಅವುಗಳನ್ನ ಒಟ್ಟಾರೆಯಾಗಿ ನಿಪಿ-6 ಎಂದು ಗುರುತಿಸಲಾಯಿತು. ನೇಮಕಾತಿ ಅಧಿಸೂಚನೆಯನ್ನ ನೋಡಿ ಗುರುತಿಸಿದ್ದೇನೆ. ಅದನ್ನ ನಿಪಿ-7 ಎಂದು ಗುರುತಿಸಲಾಯಿತು. ಅಂತಿಮ ಆಯ್ಕೆ ಪಟ್ಟಿಯನ್ನ ನೋಡಿ ಗುರುತಿಸಿದ್ದೇನೆ. ಅದನ್ನ ನಿಪಿ-8 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಡಿ.ಸಿ.ಪಿ ವಕೀಲರಿಂದಃ-</u>

ದೂರು ದಾಖಲು ಮಾಡುವ ಮೊದಲು ನಿಮಗೆ ಆರೋಪಿ ಬಗ್ಗೆ ಮಾಹಿತಿ ಇತ್ತಾ ಎಂದರೆ ಸಾಕ್ಷಿ ಆತನ ಮೇಲೆ ಇಲಾಖಾ ವಿಚಾರಣೆ ನಡೆದಿರುವುದಾಗಿ ತಿಳಿದಿತ್ತು ಎನ್ನುತ್ತಾರೆ. ದೂರು ದಾಖಲು ಮಾಡುವ ಮೊದಲು ದಾಖಲಾತಿಗಳನ್ನ ಪರಿಶೀಲನೆ ಮಾಡಿ ಸತ್ಯಾಸತ್ಯತೆಗಳನ್ನ ತಿಳಿದುಕೊಳ್ಳುವ ಪ್ರಯತ್ನ ಮಾಡಿರುತ್ತೀರಾ ಎಂದರೆ ಸಾಕ್ಷಿ ಗೌರವಾನ್ವಿತ ಶಿಸ್ತು ಪ್ರಾಧಿಕಾರ ಮತ್ತು ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಡಿ.ಇ.ಯಲ್ಲಿ ಹೊರಡಿಸಿದ್ದ ಅಂತಿಮ ಆದೇಶದಂತೆ ಮತ್ತು ನನಗೆ ಇದ್ದ ನಿರ್ದೇಶನದಂತೆ ನಾನು ಪೊಲೀಸರಿಗೆ ದೂರು ಕೊಟ್ಟಿದ್ದೇನೆ ಎನ್ನುತ್ತಾರೆ. ಇಲಾಖಾ ವಿಚಾರಣೆ ಫಲಿತಾಂಶವನ್ನ ಹೊರತುಪಡಿಸಿ ನನಗೆ ಸದರಿ ಪ್ರಕರಣದ ಬಗ್ಗೆ ಆ ಮೊದಲು ಮಾಹಿತಿ ಇರಲಿಲ್ಲ. ದೂರನ್ನ ನಾನೇ ಟೈಪ್ ಮಾಡಿಸಿ ಪೊಲೀಸರಿಗೆ ಕೊಟ್ಟಿರುತ್ತೇನೆ. ದೂರನ್ನ ದಿಃ30.04.2022 ರಂದು ಪೊಲೀಸರಿಗೆ ದಾಖಲಿಸಿರುತ್ತೇನೆ. ಈ ಪ್ರಕರಣದ ಸಂಬಂಧ ದೂರು ದಾಖಲಾಗುವ ಮೊದಲು ನಾನು ಪೊಲೀಸ್ ಠಾಣೆಗೆ ಹೋಗಿಲ್ಲ. ಇಲಾಖಾ ವಿಚಾರಣಾ ವರದಿ ಮತ್ತು ಮಾನ್ಯ ಪ್ರಧಾನ ಮತ್ತು ಜಿಲ್ಲಾ ನ್ಯಾಯಾಧೀಶರ ಆದೇಶವನ್ನ ದೂರು ದಾಖಲು ಮಾಡುವ ಮೊದಲು ನೋಡಿದ್ದೀರಾ ಎಂದರೆ ಸಾಕ್ಷಿ ಅದನ್ನ ಆಧರಿಸಿ ನಾನು ಪೊಲೀಸರಿಗೆ ದೂರು ಕೊಟ್ಟಿರುತ್ತೇನೆ ಎನ್ನುತ್ತಾರೆ. ದೂರು ದಾಖಲಾಗುವ ಮೊದಲು ಯಾವುದೇ ದಾಖಲಾತಿಯನ್ನ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಪೊಲೀಸ್ ಇಲಾಖೆಗೆ ಕೊಟ್ಟಿಲ್ಲ. ದೂರು ಕೊಡುವ ಮೊದಲು ಆರೋಪಿಗೆ ಸಂಬಂಧಿಸಿದ ವಿವಾದಿತ ಅಂಕಪಟ್ಟಿಯನ್ನ ನಾನು ನೋಡಿಲ್ಲ.

ಶಿಸ್ತುಪ್ರಾಧಿಕಾರ ದಿಃ30.04.2022 ರಂದು ಆದೇಶ ಹೊರಡಿಸಿದೆ. ಶಿಸ್ತುಪ್ರಾಧಿಕಾರ ಆದೇಶ ಹೊರಡಿಸಿದ ದಿನದಂದೇ ನಾನು ಪೊಲೀಸರಿಗೆ ದೂರು ಕೊಟ್ಟಿರುತ್ತೇನೆ. ತನಿಖಾಧಿಕಾರಿ ಯಾವ ದಿನಾಂಕದಂದು ಮಹಜರ್ ಕ್ರಮ ಜರುಗಿಸಿದ್ದಾರೆ ಎಂದು ಈಗ ನೆನಪಿಲ್ಲ. ಮಹಜರ್ ಬರೆಯಲು ಇಬ್ಬರು ಪೊಲೀಸ್ ನವರು ಬಂದಿದ್ದು ಅವರ ಹೆಸರು ಈಗ ನೆನಪಿಲ್ಲ. ಮಹಜರ್ ಕಾಲಕ್ಕೆ ಸಾಕ್ಷಿದಾರರಾಗಿ ಪ್ರದೀಪ ಮತ್ತು ಶಿವಪ್ಪ ಎನ್ನುವವರು ಇದ್ದರು. ಮಹಜರ್ ಸಾಕ್ಷಿದಾರರು ಪುರಸಭೆ ಸಿಬ್ಬಂದಿಗಳು. ಪಂಚಸಾಕ್ಷಿಗಳು ಯಾವ ಊರಿನವರು ಎಂದು ನನಗೆ ಮಾಹಿತಿ ಇಲ್ಲ. ಮಹಜರ್ ಬರೆದ ಕಾಲಕ್ಕೆ ನಮ್ಮ ಕಛೇರಿಯ ಬೇರೆ ಯಾರೂ ಸಿಬ್ಬಂದಿಗಳು ಇರಲಿಲ್ಲ. ಮಹಜರ್ ಅನ್ನ ಸಂಜೆಃ04.00 ರಿಂದ 05.00 ಗಂಟೆಯವರೆಗೆ ಬರೆಯಲಾಯಿತು. ಮಹಜರ್ ನಲ್ಲಿ ಏನು ಬರೆದಿದೆ ಎಂದು ಈಗ ನೆನಪಿಲ್ಲ. ನಿಪಿ-2 ರ ಮಹಜರ್ ನ ಅಡಿ ಯಾವುದೇ ದಾಖಲೆಯನ್ನ ಅಮಾನತ್ತುಪಡಿಸಿಲ್ಲ. ನಾನು ಜಿಲ್ಲಾ ನ್ಯಾಯಾಧೀಶರ ಆದೇಶದ ಮೇರೆಗೆ ದೂರು ದಾಖಲು ಮಾಡಿದ್ದನ್ನ ಹೊರತುಪಡಿಸಿ ಈ ಪ್ರಕರಣದ ಬಗ್ಗೆ ನನಗೆ ಬೇರೆ ಮಾಹಿತಿ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ನಾನು ಇಲಾಖಾ ವಿಚಾರಣಾ ವರದಿಯನ್ನ ಮತ್ತು ಶಿಸ್ತುಪ್ರಾಧಿಕಾರದ ಆದೇಶವನ್ನ ಓದಿ ನಂತರ ದೂರು ಕೊಟ್ಟಿರುತ್ತೇನೆ ಎನ್ನುತ್ತಾರೆ. ನೀವು ತನಿಖಾಧಿಕಾರಿ ಮುಂದೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನ ಹಾಜರು ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಪತ್ರ ವ್ಯವಹಾರ ಮಾಡಿ ನಿಪಿ-6 ರಿಂದ ನಿಪಿ-8 ನ್ನ ಹಾಜರು ಮಾಡಿದ್ದೇನೆ ಎನ್ನುತ್ತಾರೆ. ಯಾವ ಯಾವ ದಿನಾಂಕದಂದು ಯಾವ ಯಾವ ದಾಖಲೆಗಳನ್ನ ತನಿಖಾಧಿಕಾರಿ ಮುಂದೆ ಹಾಜರು

ಮಾಡಿದ್ದೀರಾ ಎಂದರೆ ಸಾಕ್ಷಿ ದಿನಾಂಕ ನೆನಪಿಲ್ಲ ಆದರೆ ಇಲಾಖಾ ವಿಚಾರಣೆಗೆ ಸಂಬಂಧಿಸಿದ ದಾಖಲೆಗಳು, ಅಧಿಸೂಚನೆ ಮತ್ತು ನೇಮಕಾತಿ ಆದೇಶವನ್ನ ಹಾಗೂ ಇತರ ಅಡಕಗಳನ್ನ ತನಿಖಾಧಿಕಾರಿ ಮುಂದೆ ಹಾಜರು ಮಾಡಿದ್ದೇನೆ ಎನ್ನುತ್ತಾರೆ. ನಾನು ತನಿಖಾಧಿಕಾರಿ ಮುಂದೆ ಯಾವುದೇ ದಾಖಲೆಗಳನ್ನ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಜಿಲ್ಲಾ ನ್ಯಾಯಾಧೀಶರ ಪ್ರಭಾವಕ್ಕೆ ಒಳಗಾಗಿ ಆರೋಪಿ ವಿರುದ್ಧ ಸುಳ್ಳು ದೂರು ದಾಖಲು ಮಾಡಿ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರು ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ನಿಪಿ-1 ರ ದೂರಿನ ಅಂಶಗಳಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಅಂಶಗಳನ್ನ ಒಳಗೊಂಡ ಆರೋಪಿ ವಿರುದ್ಧ ದೂರು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಆರೋಪಿಯನ್ನ ಹೊರತುಪಡಿಸಿ ಬೇರೆ ಯಾವುದೇ ಅಧಿಕಾರಿಯನ್ನ ಆರೋಪಿಯನ್ನಾಗಿ ಮಾಡಿಲ್ಲ ಎಂದರೆ ಸರಿ. ಆರೋಪಿಯ ಅಂಕಪಟ್ಟಿಯನ್ನ ಮುಖ್ಯೋಪಾಧ್ಯಾಯರು ಶ್ರೀರೇಣುಕಾ ಹಿರಿಯ ಪ್ರಾಥಮಿಕ ಶಾಲೆ, ಕಮ್ಮತ್ತಹಳ್ಳಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರು ನೀಡಿರುತ್ತಾರೆ. ವಿವಾದಿತ ಅಂಕಪಟ್ಟಿಯನ್ನ ಕೈಬರವಣಿಗೆ ತಜ್ಞರಿಗೆ ಕಳುಹಿಸಿ ಅಭಿಪ್ರಾಯ ಪಡೆಯಲಾಗಿದೆಯಾ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಕ್ಷೇತ್ರ ಶಿಕ್ಷಣಾಧಿಕಾರಿಗಳಾಗಲೀ, ಶಾಲಾ ಪ್ರಾಧಿಕಾರಿಗಳಾಗಲೀ ಅಥವಾ ಇತರ ಪ್ರಾಧಿಕಾರ ಆರೋಪಿ ವಿರುದ್ಧ ವಿವಾದಿತ ಅಂಕಪಟ್ಟಿ ಸಂಬಂಧ ಕ್ರಮ ಜರುಗಿಸಿರುತ್ತಾರಾ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ.

C.C.No.715/2024
PW-1 CW-1

ಆರೋಪಿ ವಿರುದ್ಧ  ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ಸವಾಲುಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್‌ಆರ್ಃ